ಈ ಸಾಕ್ಷಿಯನ್ನು ದಿನಾಂಕಃ 23.03.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದ**

ನನ್ನ ಮತ್ತು ಅರ್ಜಿದಾರರ ಮದುವೆ ಹಿರಿಯರು ನೋಡಿ ಮಾಡಿದ ಮದುವೆಯಾಗಿರುತ್ತದೆ ಎಂದರೆ ಸರಿ. ಮದುವೆ ಸಮಯದಲ್ಲಿ ನನಗೆ ಅರ್ಜಿದಾರರ ಕಡೆಯಿಂದ 30 ಗ್ರಾಂ ಚಿನ್ನದ ಸರ, 6 ಗ್ರಾಂ ಚಿನ್ನದ ಉಂಗುರ ಹಾಗೂ 25 ಸಾವಿರ ಸೂಟ್ ಬೂಟಿಗೆ ಕೊಟ್ಟಿದ್ದಾರೆ ಎಂದರೆ ಸರಿ. ಸಾಕ್ಷಿಯು ಚೌಟರಿ ಖರ್ಚನ್ನು ನಾವು ಮಾಡಿರುತ್ತೇವೆಂದು ಉತ್ತರಿಸುತ್ತಾರೆ. ಮದುವೆ ಖರ್ಚನ್ನು ಅರ್ಜಿದಾರರ ತಂದೆ ತಾಯಿ ಮಾಡಿರುತ್ತಾರೆ ಎಂದರೆ ಸರಿಯಲ್ಲ ನಾವೇ ಮಾಡಿರುತ್ತೇವೆ. ನನಗೆ ಇಬ್ಬರು ಹೆಣ್ಣುಮಕ್ಕಳಿದ್ದಾರೆ ಎಂದರೆ ಸರಿ. ನನ್ನ ಒಬ್ಬ ಮಗಳ ಹೆಸರು ಆಧ್ಯ ಇನ್ನೊಬ್ಬ ಮಗಳ ಹೆಸರು ನನಗೆ ಗೊತ್ತಿರುವುದಿಲ್ಲ. ನನಗೆ ಮೂರು ಜನ ಅಕ್ಕತಂಗಿಯರಿರುತ್ತಾರೆ. ನನ್ನ ಅಕ್ಕಂದಿರು ನನ್ನ ಜೊತೆ ವಾಸವಿದ್ದಾರೆ. ಮೂರು ಜನ ಅಕ್ಕತಂಗಿಯರು ಕೆಲಸಕ್ಕೆ ಹೋಗುತ್ತಾರೆ ಎಂದರೆ ಸರಿ. ಮೂರು ಜನ ಅಕ್ಕತಂಗಿಯರು ನನ್ನ ತಂದೆ ತಾಯಿ ಜೊತೆ ಇದ್ದಾರೆ ಎಂದರೆ ಸರಿ. ಸಾಕ್ಷಿಯು ನಾವೆಲ್ಲಾ ಒಟ್ಟಿಗೆ ಇರುತ್ತೇವೆ ಎಂದು ಉತ್ತರಿಸುತ್ತಾರೆ.

ನಮಗೆ ಎರಡು ಸ್ವಂತ ಮನೆಗಳಿವೆ ಎಂದರೆ ಸರಿ. ನನಗೆ ಮಧುವಿನಹಳ್ಳಿಯಲ್ಲಿ ಒಂದು ಹೆಂಚಿನ ಮನೆ ಇದೆ ಅದನ್ನು ಬಾಡಿಗೆಗೆ ಕೊಟ್ಟಿದ್ದೇವೆ ಎಂದರೆ ಸಾಕ್ಷಿಯು ಅದು ಮಳೆಗೆ ಬಿದ್ದು ಹೋಗಿದೆ ಎಂದು ಉತ್ತರಿಸುತ್ತಾರೆ. ಲಿಂಗಣಾಪುರದಲ್ಲಿ ನಮಗೆ ಆರ್ ಸಿ ಸಿ ಮನೆ ಇದೆ ಎಂದರೆ ಸರಿ. ಎರಡು ಮನೆಗಳ ಪೈಕಿ ಒಂದು ಮನೆಯಲ್ಲಿ ಅರ್ಜಿದಾರರನ್ನು ಇರಿಸಿಕೊಳ್ಳಲು ತೊಂದರೆ ಇದೆಯಾ ಎಂಬ ಪ್ರಶ್ನೆಗೆ ಸಾಕ್ಷಿಯು ಒಂದು ಮನೆ ಬಿದ್ದು ಹೋಗಿದೆ ಇನ್ನೊಂದು ಮನೆಗೆ ಕರೆದುಕೊಂಡು ಹೋಗಲು ಇಷ್ಟ ಪಡುವುದಿಲ್ಲ ಕಾರಣ ಆಕೆ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ ಎಂದು ಉತ್ತರಿಸುತ್ತಾರೆ. ಅರ್ಜಿದಾರರು ನನ್ನ ಜೊತೆ ಮತ್ತು ನನ್ನ ತಂದೆ ತಾಯಿ ಜೊತೆ ಇರುವುದಾದರೆ ಕರೆದುಕೊಂಡು ಹೋಗಲು ನನ್ನ ಅಭ್ಯಂತರವಿಲ್ಲ. ಅರ್ಜಿದಾರರು ನನ್ನ ಬಳಿ ಬೇರೆ ಮನೆ ಮಾಡು ಇಲ್ಲದಿದ್ದರೆ ನೇಣು ಹಾಕಿಕೊಂಡು ಸಾಯುತ್ತೇನೆ ಎಂದು ಹೇಳಿದ್ದು ಈ ಬಗ್ಗೆ ನ್ಯಾಯ ಪಂಚಾಯಿತಿ ಮಾಡಿದೆ ಎಂದು ನಾನು ಹೇಳಿದ್ದು ಆ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ. ಅರ್ಜಿದಾರರಿಗೆ ಆಕೆಯ ತಾಯಿಯ ತಮ್ಮನ ಜೊತೆ ಅನೈತಿಕ ಸಂಬಂಧ ಇರುವ ಬಗ್ಗೆ ನಾನು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ.

ನಾನು ಲಾರಿ ಚಾಲಕನಾಗಿ ಕೆಲಸ ಮಾಡುತ್ತೇನೆ. ನಾನು ದಿನಕ್ಕೆ ರೂ. 300/- ರಿಂದ 400/- ರೂ. ಸಂಪಾದನೆ ಮಾಡುತ್ತೇನೆ. ತಿಂಗಳಿಗೆ ನಾನು 10 ಸಾವಿರ ದುಡಿಯುತ್ತೇನೆ. ನನಗೆ ಸ್ವಂತ ಲಾರಿ ಇದ್ದು ಲಾರಿಯಿಂದ ನಾನು ತಿಂಗಳಿಗೆ 25 ರಿಂದ 30 ಸಾವಿರ ದುಡಿಯುತ್ತೇನೆ ಎಂದು ಹೇಳುವುದು ಸುಳ್ಳು. ನನಗೆ ಇಷ್ಟು ಸಂಪಾದನೆ ಇದ್ದರೂ ನನ್ನ ಹೆಂಡತಿ ಮಕ್ಕಳನ್ನು ಕರೆದುಕೊಂಡು ಹೋಗಲು ಹಿಂಜರಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಂದ ನನಗೆ ಯಾವುದೇ ತೊಂದರೆಯಾಗಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರು ನನಗೆ ಬೇರೆ ಮನೆ ಮಾಡು ಎಂದು ತೊಂದರೆ ಕೊಡುತ್ತಿದ್ದರು ಮತ್ತು ನನ್ನ ಜೊತೆ ಹೊಂದಾಣಿಕೆಯಾಗುತ್ತಿರಲಿಲ್ಲ ಎಂದು ಉತ್ತರಿಸುತ್ತಾರೆ. ಅರ್ಜಿದಾರರ ತಂದೆ

ತಾಯಿ ಕೂಲಿ ಕೆಲಸ ಮಾಡುತ್ತಾರೆ ಎಂದರೆ ಸಾಕ್ಷಿಯು ಅವರಿಗೆ 8 - 9 ಎಕರೆ ಜಮೀನಿದೆ ಎಂದು ಉತ್ತರಿಸುತ್ತಾರೆ ಆ ಬಗ್ಗೆ ದಾಖಲೆ ಹಾಜರು ಪಡಿಸಿದ್ದೇನೆ. ಅರ್ಜಿದಾರರ ತಮ್ಮ ಅಂಗವಿಕಲ ಎಂದರೆ ಸರಿ.

ಅರ್ಜಿದಾರರಿಗೆ ಯಾವುದೇ ಆದಾಯದ ಮೂಲಗಳಿಲ್ಲ ಎಂದರೆ ಸರಿಯಲ್ಲ ಅರ್ಜಿದಾರರಿಗೆ ಜಮೀನಿದೆ ಮತ್ತು ಆಕೆ ಬಿ ಎಡ್ ಮಾಡಿ ಮಕ್ಕಳಿಗೆ ಟ್ಯೂಷನ್ ಕೊಟ್ಟು ಸಂಪಾದನೆ ಮಾಡುತ್ತಾರೆ ಎಂದು ಉತ್ತರಿಸುತ್ತಾರೆ. ಪಾಳ್ಯದಲ್ಲಿರುವ ಶಿವು ವಿದ್ಯಾ ಕೇಂದ್ರದಲ್ಲಿ ಅರ್ಜಿದಾರರು ಪಾಠ ಕಲಿಸಲು ಹೋಗುತ್ತಾರೆ ಆ ಬಗ್ಗೆ ನಾನು ದಾಖಲೆ ಹಾಜರು ಪಡಿಸಿಲ್ಲ. ನಾನುಲಾರಿ ಚಾಲಕನಾಗಿದ್ದು ರಾತ್ರಿ ಕುಡಿದುಕೊಂಡು ಬಂದು ಅರ್ಜಿದಾರರಿಗೆ ಹಿಂಸೆ ಕೊಡುತ್ತಿದ್ದೆ ಎಂದರೆ ಸುಳ್ಳು. ಆದರೂ ಕೂಡ ಅರ್ಜಿದಾರರು ನನ್ನ ಜೊತೆ ಜೀವನ ಮಾಡಲು ಸಿದ್ದರಿದ್ದಾರೆ ಎಂದರೆ ಸಾಕ್ಷಿಯು ನಮ್ಮ ಅಪ್ಪ ಅಮ್ಮನ ಜೊತೆ ಇದ್ದರೆ ಕರೆದುಕೊಂಡು ಹೋಗಲು ಸಿದ್ದ ಎಂದು ಉತ್ತರಿಸುತ್ತಾರೆ. ಅರ್ಜಿದಾರರು ನನ್ನ ಅಪ್ಪ ಅಮ್ಮ ಮತ್ತು ನನ್ನ ಅಕ್ಕತಂಗಿಯರ ಜೊತೆ ಇದ್ದಾಗ ಅವರು ಅರ್ಜಿದಾರರಿಗೆ ಚಿತ್ರಹಿಂಸೆ ಕೊಡುತ್ತಿದ್ದರು ಎಂದರೆ ಸುಳ್ಳು. ಅರ್ಜಿದಾರರು ಗರ್ಭವತಿಯಾಗಿದ್ದಾಗ ನನ್ನ ತಾಯಿ ಮತ್ತು ಅಕ್ಕತಂಗಿಯರು ಮಗುವನ್ನು ತೆಗೆಸು ಎಂದು ಹಿಂಸೆ ಕೊಡುತ್ತಿದ್ದರು ಎಂದು ಹೇಳುವುದು ಸುಳ್ಳು. ನಾನು ಕೂಡ ಆಕೆಗೆ ನೀನು ತುಂಬಾ ನಿಶ್ಶಕ್ತಿಯಾಗಿದ್ದೀ ಮಗುವನ್ನು ತೆಗೆಸು ಎಂದು ಹೇಳಿದ್ದೆ ಎಂದರೆ ಸುಳ್ಳು. ಸಾಕ್ಷಿಯು ಆಕೆಯ ಹೊಟ್ಟೆಯಲ್ಲಿ ಗಂಟು ಇದ್ದ ಕಾರಣ ಅದನ್ನು ತೆಗೆಸಿ ಮತ್ತೆ ಮಗು ಮಾಡಿಕೊಳ್ಳೋಣ ಎಂದು ಹೇಳಿದ್ದೆ ಎಂದು ಉತ್ತರಿಸುತ್ತಾರೆ. ಅರ್ಜಿದಾರರು ಮಗುವನ್ನು ತೆಗೆಸಲಿಲ್ಲ ಆಕೆಗೆ ಆದ್ಯ ಎಂಬ ಮಗು ಹುಟ್ಟಿದೆ ಎಂದರೆ ಸರಿ. ಎರಡನೇ ಮಗು ನನ್ನ ಮಗುವಾಗಿದ್ದರೂ ನನಗೆ ಹುಟ್ಟಿಲ್ಲ ಎಂದು ಸುಳ್ಳು ಆರೋಪ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅದು ನನ್ನ ಮಗುವಲ್ಲ ಎಂದು ಉತ್ತರಿಸುತ್ತಾರೆ.

ಅರ್ಜಿದಾರರು ಕೊಳ್ಳೇಗಾಲದ ಅಪರ ಸಿವಿಲ್ ನ್ಯಾಯಾಲಯದಲ್ಲಿ ಜೀವನಾಂಶ ಕೋರಿ ಸಿ.ಮಿಸ್ ನಂ. ಸಂಃ 185/2024 ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅರ್ಜಿಯಲ್ಲಿ ನನ್ನ ಪರವಾಗಿ ವಕೀಲರು ವಕಾಲತ್ತು ಹಾಕಿದ್ದಾರೆ ಎಂದರೆ ಸರಿ. ಸದರಿ ಅರ್ಜಿಯಲ್ಲಿ ನಾನು ತಕರಾರು ಹಾಕಲಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರು ನನ್ನ ಮನೆಯಲ್ಲಿದ್ದಾಗ ನನಗಾಗಲೀ ನನ್ನ ತಂದೆ ತಾಯಿಗಾಗಲೀ ಏನು ತೊಂದರೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿದೆ,
ಓ ಹೇ ಕೇ ಸರಿ ಇದೆ,

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕೊಳ್ಳೇಗಾಲ